ಹೆಚ್ಚಿನ ಹಣ ಬಿಡುಗಡೆ - ಮಾಡುವುದಕ್ಕೆ ಸರ್ಕಾರ ಡೆಫೆನೆಟ್ ಹಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಮುಂಡರಗಿ ತಾಲ್ಲೂಕಿನಲ್ಲಿ ಅತಿವೃಷ್ಟಿ ಹಾನಿಗೆ ಹಣ ಬಿಡುಗಡೆ

445 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ, ಮನೆ ಮತ್ತು ಪಂಪ್ಸೆಟ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿರುವ ವಿಷಯದಲ್ಲಿ ಸರ್ಕಾರದವರು ಆದೇಶವನ್ನು ಹೊರಡಿಸಿದರೂ ಪೂರ್ತಿ ಹಣ ಬಿಡುಗಡೆಯಾಗಿರುವುದಿಲ್ಲದಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಆ) ಮುಂಡರಗಿ ತಾಲ್ಲೂಕಿನಲ್ಲಿ ಆ ಹಳ್ಳಿಗಳು ಪ್ರವಾಹದಿಂದ ಮೇಲಿಂದ ಮೇಲೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಹಳ್ಳಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) 1992ನೇ ನವೆಂಬರ್ ಅತಿವೃಷ್ಟಿಯಿಂದ ಮುಂಡರಗಿ ತಾಲ್ಲೂಕಿನಲ್ಲಿ 940 ಪೂರ್ತಿ ಬಿದ್ದ ಮನೆಗಳ ನೊಂದ ಸಂತ್ರಸ್ಥರಿಗೆ ರೂ. 50,37,417 ಹಾಗೂ 8295 ಭಾಗಶಃ ಬಿದ್ದ ಮನೆಗಳ ನೊಂದ ಸಂತ್ರಸ್ಥರಿಗೆ ರೂ. 49,20,240-00 ಪರಿಹಾರ ನೀಡಿದೆ. ಈ ತಾಲ್ಲೂಕಿನಲ್ಲಿ ಒಟ್ಟು 563 ನೀರಾವರಿ ಪಂಪ್ ಸೆಟ್ಟು, 811 ಪಂಪ್‌ಹೌಸ್ ಹಾಗೂ 911 ನೀರಾವರಿ ಭಾವಿಗಳು ಹಾನಿಯಾಗಿರುವುವು. ನೊಂದ ಸಂತ್ರಸ್ಥರಿಗೆ ಪರಿಹಾರ ನೀಡಲು ತಹಶೀಲ್ದಾರ್ ಮುಂಡರಗಿ ಇವರಿಗೆ ಒಟ್ಟು 15.63 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಇಲ್ಲಿಯವರೆಗೆ ಪ್ರತಿಯೊಬ್ಬ ನೊಂದ ಸಂತ್ರಸ್ಥರಿಗೆ ರೂ. 1000-00ದಂತೆ ಒಟ್ಟು 13.48 ಲಕ್ಷ ರೂ.ಗಳ ಪರಿಹಾರವನ್ನು ನೀಡಿದ್ದಾರೆ.

ಆ) ಹೌದು, ಆದರೆ ಪ್ರವಾಹಕ್ಕೆ ತುತ್ತಾಗಿರುವ ಗ್ರಾಮಗಳ ಸಂಖ್ಯೆ - 5

ಇ) ಹೌದು. ಇದಕ್ಕಾಗಿ ಇದುವರೆಗೆ ರೂ. 6.50 ಲಕ್ಷ ಬಿಡುಗಡೆ ಮಾಡಲಾಗಿದ್ದು; ರೂ. 5.50 ಲಕ್ಷ ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

ಶ್ರೀ ಕೆ.ಎಚ್. ಕುರಡಗಿ : ಮಾನ್ಯ ಅಧ್ಯಕ್ಷರೇ, 92ನೇ ಸಾಲಿನಲ್ಲಿ ಈ ಸ್ಕೇರ್ ಸಿಟಿ, ಬಂದಾಗಿನ ಬಾಬ್ತು ಇನ್ನೂ ಅಮೌಂಟ್ ಪೂರ್ಣ ಬಿಡುಗಡೆಯಾಗಿಲ್ಲ, ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಆಗ ಒಂದು ಸಾವಿರ ಕೊಟ್ಟಿದ್ದಾರೆ. ತಾವು ಸರಕಾರದಿಂದ ಮೂರು ಸಾವಿರ ಎಂದು ಅನೌನ್ಸ್ ಮಾಡಿದ್ದೀರಿ. ಒಂದೊಂದು ಸಾವಿರ ರೂಪಾಯಿ ಕೊಟ್ಟು ಉಳಿದ ಅಮೌಂಟ್ ಕೊಡದೇ ಇರುವುದರಿಂದ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಇದು 92 ರದ್ದು ಆಯಿತು. 94-95 ರಲ್ಲಿಯೂ ಫ್ಲಡ್ ಬಂದಿದೆ, ಅದಕ್ಕೆ ತಾವು ಏನು ಮಾಡುತ್ತೀರಿ ಹೇಳಿರಿ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಕುರಡಗಿಯವರು ಮೂರು ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪೂರ್ತಿ ಬಿದ್ದ ಮನೆಗಳಿಗೆ, ಭಾಗಶಃ ಬಿದ್ದ ಮನೆಗಳಿಗೆ ಹಾಗೂ ಪಂಪ್ಸೆಟ್ಟಿಗಳಿಗೆ ಸರಕಾರದವರು ಎಷ್ಟು ದುಡ್ಡು ಕೊಟ್ಟಿದ್ದಾರೆ ಎಂದು ಕೇಳಿದ್ದಾರೆ, ಅವರು ಕೇಳಿದ ಪ್ರಶ್ನೆ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಈಗಾಗಲೇ ಒಂದು ಪಂಪ್ಸೆಟ್ಟಿಗೆ ಮ್ಯಾಕ್ಸಿಮಮ್ ಮೂರು ಸಾವಿರ ರೂಪಾಯಿ ಕೊಡಬೇಕೆಂದು ಸರ್ಕಾರದ ಆದೇಶ ಆಗಿದೆ. ಇವತ್ತು

ಅಲ್ಲಿಯ ಜಿಲ್ಲಾಧಿಕಾರಿಗಳು ಪ್ರತಿಯೊಂದು ಪಂಪ್ಸೆಟ್ಟಿಗೆ ಒಂದು ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇನ್ನೂ ಕೂಡಾ ಹೆಚ್ಚು ಬೇಕಾದರೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬಹುದು. ಒಂದನ್ನು ತಮ್ಮ ಗಮನಕ್ಕೆ ತರುತ್ತೇನೆ 9040 ಬಿದ್ದ ಮನೆಗಳಿಗೆ ಈಗಾಗಲೇ 50 ಲಕ್ಷ 37 ಸಾವಿರ ರೂಪಾಯಿ ಮುಂಡರಗಿ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ್ದೇವೆ. 8295 ಮನೆಗಳು ಭಾಗಶಃ ಏನು ಬಿದ್ದಿವೆ ಅದಕ್ಕೆ 49 ಲಕ್ಷ ಬಿಡುಗಡೆ ಮಾಡಿದ್ದೇವೆ, ಮತ್ತು ನೀರಾವರಿ ಪಂಪುಸೆಟ್ಟುಗಳು 563, ನೀರಾವರಿ ಬಾವಿಗಳು 911, ಪಂಪ್ ಹೌಸ್ಗಳು 811 ಒಟ್ಟಿಗೆ ಇವುಗಳಿಗೆ 13ಲಕ್ಷ 48 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟು ಮುಂಡರಗಿ ಕ್ಷೇತ್ರಕ್ಕೆ ಹೋದವರ್ಷ 1 ಕೋಟಿ 13 ಲಕ್ಷ ಬಿಡುಗಡೆ ಮಾಡಿದ್ದೇವೆ, ದೊಡ್ಡ ಮೊತ್ತ ಬಿಡುಗಡೆ ಮಾಡಿದ್ದೇವೆ. ಪಂಪ್ಸೆಟ್ಟಿಗೆ ಮೂರು ಸಾವಿರ ರೂಪಾಯಿ ಕೊಡಬೇಕೆಂದು ಏನು ಆದೇಶ ಇದೆ ಕೇವಲ ಒಂದು ಸಾವಿರ ಬಂದಿದೆ ಎಂದು ಏನು ಹೇಳಿದ್ದಾರೆ, ಅದರ ಬಗ್ಗೆ ಚಿಕಪ್ ಮಾಡಿಸಿ ಮ್ಯಾಕ್ಸಿಮಮ್ ಎಷ್ಟು ಕೊಡಬೇಕೋ ಅದನ್ನೂ ಕೂಡಾ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ.ಹೆಚ್. ಕುರಡಗಿ : ಐದು ಹಳ್ಳಿಗಳನ್ನು ಸ್ಥಳಾಂತರ ಮಾಡುತ್ತೇವೆ ಎಂದು ಹೇಳಿದ್ದೀರಿ, ಇವತ್ತಿನವರೆಗೆ ಅವುಗಳನ್ನು ಸ್ಥಳಾಂತರ ಮಾಡಲಿಲ್ಲ. ಅದಕ್ಕೆ ಅಮೌಂಟ್ ಕೂಡಾ ಕೊಡಲಿಲ್ಲ. ಮತ್ತೆ 94-95ರ ಒಳಗೂ ಮತ್ತೆ ಫ್ಲಡ್ ಬಂದು ಮನೆಗಳು ಬಿದ್ದು ಹೋಗುತ್ತಿದೆ, ಅದಕ್ಕೆ ತಾವು ಏನು ಮಾಡುತ್ತೀರಿ?

ಶ್ರೀ ಧರ್ಮಸಿಂಗ್ : ಅಲ್ಲಿಯ ಕೆಲವು ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಒಟ್ಟು 66 ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಈಗಾಗಲೇ 6 ಲಕ್ಷ 50 ಸಾವಿರ ಬಿಡುಗಡೆ ಮಾಡಿದ್ದೇವೆ. ಒಟ್ಟಾರೆ ಹೋದವರ್ಷ 92-93ನೇ ಸಾಲಿನಲ್ಲಿ ರಾಯಚೂರು, ಚಿತ್ರದುರ್ಗ, ಧಾರವಾಡ ಜಿಲ್ಲೆ ಮತ್ತು ಬೇರೆ ಕಡೆಗೆ ರಿಹ್ಯಾಬಿಲಿಟೇಷನ್ ಮಾಡತಕ್ಕ 126 ಹಳ್ಳಿಗಳಿಗೆ 1050 ಕೋಟಿ ರೂಪಾಯಿಗಳ ಯೋಜನೆ ಮಾಡಿ ಕೇಂದ್ರ ಸರ್ಕಾರದಿಂದ ಅಪ್ಪಣೆ ಪಡೆದು ವಿಶ್ವಬ್ಯಾಂಕ್ ನೆರವು ಪಡೆಯುವುದಕ್ಕೆ ಹೋಗಿದೆ. ಹೋದವರ್ಷ ಕೂಡಾ ಕೆಲವು ಎಫ್ಫೆಡ್ ವಿಲೇಜಸ್ಗಳನ್ನು ಗುರುತಿಸಿ ಇವುಗಳನ್ನು ಸೇರಿಸಬೇಕೆಂದು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆದರೂ ಕೂಡ ಸ್ಥಳಾಂತರ ಮಾಡುವುದಕ್ಕೆ ಲ್ಯಾಂಡ್ ಅಕ್ವೈರ್ ಮಾಡುವುದು ಬೇರೆ ಬೇರೆ ಕೆಲಸಕಾರ್ಯಗಳಿಗೆ 66 ಲಕ್ಷ ಅಂದಾಜು ಮಾಡಿ, ಈಗಾಗಲೇ 6 ಲಕ್ಷ 50 ಸಾವಿರ ನಾವು ಖರ್ಚು ಮಾಡಿದ್ದೇವೆ, ಲ್ಯಾಂಡ್ ಅವೈಲ್ಬಲ್ ಆದಮೇಲೆ ಸ್ಥಳಾಂತರ ಮಾಡತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಧರ್ಮಸಿಂಗ್ : ಪ್ರಶ್ನೆ ಸಂಖ್ಯೆ : 191 ಸ್ವಲ್ಪ ಕಾಲಾವಕಾಶ ಕೇಳಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಈ ಸೆಕ್ಷನ್ನಲ್ಲೇ ಉತ್ತರ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಪೋಲೀಸ್ ಡಿಪಾರ್ಟ್ಮೆಂಟ್ನವರ ಜೊತೆ ಮೀಟಿಂಗ್ ಮಾಡಬೇಕಾಗಿದೆ. ಮಾಡಿ ಉತ್ತರ ಕೊಡುತ್ತೇವೆ.

ತುಮಕೂರು ನಗರಸಭೆಯ ವ್ಯಾಪ್ತಿಯಲ್ಲಿರುವ ಸ್ಥಳಗಳಿಗೆ ಮೂಲಭೂತ ನಾಗರೀಕ ಸೌಲಭ್ಯ

13 - ಶ್ರೀ ಶಫೀ ಅಹ್ಮದ್ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆ ತುಮಕೂರು ವ್ಯಾಪ್ತಿಯೊಳಗಡೆ ಸೇರಿಸಲು ಉದ್ದೇಶಿಸಿರುವ ಕ್ಯಾತಸಂದ್ರ, ಸತ್ಯಮಂಗಲ, ಮೇಲುಕೋಟೆ ಮತ್ತು ಮಲ್ಲಸಂದ್ರ ಮಂಡಲ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?